ಎದುರಿನ ರಸ್ತೆಯಲ್ಲಿ ಯಾರೇ ಹೋದರೂ ಅವರ ಹೆಸರು ಕೂಗಿ, ''ಎಲ್ಲ ಕ್ಷೇಮ ತಾನೇ. ಏನು ವಿಶೇಷ?'' ಅಂತ ವಿಚಾರಿಸದೆ ಇರುತ್ತಿರಲಿಲ್ಲ ಆತ. ''ಮೌಶಿ, ಇವತ್ತೇನು ಅಡುಗೆ ಮಾಡಿದ್ದೀರಿ?'' ಎಂದೋ, ''ಏನು ಅಂಕಲ್, ತುಂಬ ದಿನ ಆಯ್ತು ನಿಮ್ಮನ್ನು ಕಾಣದೆ? ಕ್ಷೇಮ ತಾನೆ?'' ಎನ್ನುತ್ತಲೋ, ಸದಾ ಬಡಬಡಾಯಿಸುತ್ತಲೇ ಇರುತ್ತಿದ್ದ. ಮೂರ್ತಿ ಸಾಹೇಬರು ಕುಳಿತಿರುವುದನ್ನು ಆತ ಗಮನಿಸಿಲ್ಲ ಎಂದು ತಿಳಿದು, ''ಹೋಯ್... ಇಲ್ಲಿ ನೋಡಾ ಸುಭಾಷ್. ಇವರು ಯಾರು ಅಂತ ಹೇಳು ನೋಡೋಣ?'' ಎಂದೆ. ''ನಾನು ಬರುವ ವಿಚಾರ ಇವನಿಗೆ ಹೇಳಲಿಲ್ಲವೇ ನೀನು?'' ಅಂತ ಮೂರ್ತಿ ಸಾಹೇಬರು ತಮಾಷೆಯಾಗಿ ನಕ್ಕರು. ''ಈ ಜನ ಮೊದಲಿನ ಹಾಗಿಲ್ಲ, ಅರ್ಧಕ್ಕರ್ಧ ಆಗಿದ್ದಾನೆ ಅಲ್ವಾ?'' ಎಂದು ಹೇಳಿಕೊಂಡರು.

''ಸುಮ್ನಿರಿ ಸಾಬ್. ಇವ ಈಗ ತುಂಬ ಚಾಲೂ ಆಗಿದ್ದಾನೆ. ಮೇಲಾಗಿ ಎರಡು ಮಕ್ಕಳ ಅಪ್ಪ'' ಎಂದೆ.

ಸುಭಾಷನಿಗೆ ಗೊಂದಲ ಉಂಟಾಗಿತ್ತು. ''ಹೇಯ್... ಶುರುವಾಯ್ತಲ್ಲ ನಿಂದು. ಸುಮ್ನಿರು. ಯಾರ್‍ಯಾರೋ ಬಂದವರ ಮುಂದೆ ಏನೆಲ್ಲಾ ಬಡಬಡಿಸಬೇಡ'' ಎಂದು ರೇಗಿದ ನನ್ನ ಮೇಲೆ. ''ಇರೋ ಮಾರಾಯ. ಇವ್ರು ಯಾರೂ ಅಂತ ನೋಡು, ಮೊದಲು'' ಅಂದೆ. ಮೂರ್ತಿ ಸಾಹೇಬರಿಗೆ ನಗು ತಡೆಯಲಾಗಲಿಲ್ಲ.

''ಹೋ... ಮೂರ್ತಿ ಸಾಬ್! ಹೇಗಿದ್ದೀರಿ?'' ಎಂದು ಗುರುತು ಹಿಡಿದ ಸುಭಾಷ್.

''ಲೋ... ಮೂರ್ತಿ ಸಾಬ್ ಬರ್ತಾರೆ ಅಂತ ನನಗೆ ಯಾಕೆ ಮೊದಲೇ ಹೇಳಲಿಲ್ಲ ನೀನು?'' ಅಂತ ನನ್ನನ್ನು ಆಕ್ಷೇಪಿಸಿದ.

''ಹೇಳಿದ್ರೆ ಏನು ಮನೆಗೆ ಕರ್ಕೊಂಡು ಹೋಗಿ ಊಟ ಹಾಕಿಸ್ತಾ ಇದ್ದಿಯಾ?'' ಅಂತ ಮತ್ತೊಮ್ಮೆ ಛೇಡಿಸಿದೆ. ಮೂರ್ತಿ ಸಾಹೇಬರಿಗೆ ನಗು ತಡೆಯುವುದಕ್ಕಾಗಲಿಲ್ಲ. ಅವರೇ ಸುಭಾಷನನ್ನು ಮಾತಾಡಿಸತೊಡಗಿದರು. ಎಷ್ಟೋ ವರ್ಷಗಳ ಅನಂತರ ಹೀಗೆ ಒಬ್ಬನಲ್ಲಿ ಇಷ್ಟು ಆತ್ಮೀಯತೆಯಿಂದ ಮಾತಾಡಿದ್ದ ಸುಭಾಷ್. ನನಗೆ ಖುಷಿಯಾಗಿತ್ತು. ನಡುವೆ 'ಗನ್ನಾ ಜ್ಯೂಸು' ಗಿರಾಕಿಗಳನ್ನು ವಿಚಾರಿಸಲೆಂದು ಅತ್ತ ನಡೆದ.

''ನನ್ನ ಜೀವನ ನಿರ್ವಹಣೆಗೆ ಇದೊಂದೇ ವ್ಯವಹಾರ ಸಾಕು ಅಂತನಿಸಿತು. ಹಾಗಾಗಿ ಇಷ್ಟೆ. ರತ್ನಗಿರಿಯ ಸಮೀಪ ನಮ್ಮ ಹಳ್ಳಿ ಹರ್ಶೆಯಲ್ಲಿ ಮನೆ, ಸ್ವಲ್ಪ ತೋಟ ಈಗಲೂ ಇದೆ. ಸಣ್ಣ ಹಳ್ಳಿಮನೆ ಅದು. ತೋಟ ಅಂದ್ರೆ ಮಾವಿನ ತೋಪು ಮಾತ್ರ ಇರೋದು. ನೀವಿಲ್ಲಿದ್ದಾಗ ಆಪೂಸ್ ಮಾವು ತಂದು ಕೊಡ್ತಾ ಇದ್ದೆನಲ್ಲ, ಅದನ್ನು ಅಲ್ಲಿಂದಲೇ ತರಿಸ್ತಾ ಇದ್ದದ್ದು. ಸೀಸನ್ನಿನಲ್ಲಿ ಆಪೂಸ್ ವ್ಯಾಪಾರ ಚೆನ್ನಾಗಿ ನಡೀತದೆ, ಒಳ್ಳೆ ಆದಾಯ ಕೂಡಾ ಉಂಟು. ಮಾವು ಮಿಡಿ ಆಗುವ ಸಮಯದಿಂದ ಮೂರು ತಿಂಗಳು ತೋಟ ನೋಡಿಕೊಳ್ಳಲು ಸುಭಾಷ್ ಅಲ್ಲಿರ್ತಾನೆ, ಹೆಂಡತಿ ಜೊತೆ. ನಾಳೆ ಇವ ಅಲ್ಲಿಗೇ ಹೋಗ್ತಾ ಇರೋದು. ಇವನ ತಾಯಿ ಮಕ್ಕಳು ಇಲ್ಲೇ ಇರ್ತಾರೆ. ನಾವೇ ನೋಡಿಕೊಳ್ತೇವೆ.'' ಅಷ್ಟರಲ್ಲಿ ಸುಭಾಷ್ ಬಂದವನೇ, ''ಸಾಬ್, ನಾನು ಇವನಿಗೆ ಸಾರಿ ಸಾರಿ ಹೇಳಿದೆ. ಮಗನಿಗೆ ಎಂಜಿನಿಯರಿಂಗೋ, ಮೆಡಿಕಲ್ಲೋ ಓದಿಸು ಅಂತ. ಕೇಳ್ಲಿಲ್ಲ, ಈಗ ನೋಡಿ ನೇವಿಯಲ್ಲಿ ಕೆಲಸಕ್ಕೆ ಸೇರ್ತಾನಂತೆ. ಇವ್ರಿಗೆ ಪ್ರಾಯ ಹೋದ ಮೇಲೆ ಯಾರಿದ್ದಾರೆ ನೋಡಿಕೊಳ್ಳಲು?''

''ನೀನಿದ್ದಿಯಲ್ವಾ ಮಾರಾಯ. ನಂಗ್ಯಾಕೆ ತಲೆಬಿಸಿ'' ಎಂದವನು, ''ಅಷ್ಟಕ್ಕೂ ನಿನ್ನಪ್ಪ ನಿನ್ನನ್ನು ಎಷ್ಟು ಚಂದ ನೋಡಿಕೊಂಡಿದ್ದಾನೆ ಅಂತ ಗೊತ್ತಿಲ್ಲವೇ ನನಗೆ'' ಎನ್ನುತ್ತ ಕಿಚಾಯಿಸಿದೆ. ನನ್ನ ಮೇಲೆ ಕೋಪಿಸಿಕೊಂಡು ಏನೂ ಮಾತಾಡದೆ ಅತ್ತ ಹೋದ ಸುಭಾಷ್. ನಾನು ಮೂರ್ತಿ ಸಾಹೇಬರ ಜೊತೆ ಮಾತಿಗಿಳಿದೆ.